## ಜಿಲ್ಲಾಧಿಕಾರಿಗಳು, ಹಾನ ಜಿಲ್ಲೆ, ಹಾಸನರವರ ಕಛೇರಿ ನಡವಳಿಗಳು:

ವಿಷಯ:- ಹಾಸನ ಜಿಲ್ಲೆ ಚನ್ನರಾಯಪಟ್ಟಣ ಮತ್ತು ಹಾಸನ ತಾಲ್ಲೂಕು ಮರ್ಕುಲಿ, ಚಿಕ್ಕನಾಯಕನಹಳ್ಳಿ, ಕಲ್ಕೆರೆ ಗ್ರಾಮದ ರೈತರುಗಳಾದ ಮಂಜೇಗೌಡ ಬಿನ್ ರಂಗೇಗೌಡ, ನಂಜೇಗೌಡ ಬಿನ್ ಅಮಾಸೇಗೌಡ ಮತ್ತು ರಂಗಸ್ವಾಮಿ ಬಿನ್ ಲೇ:ಕಾಳೇಗೌಡ ಇವರುಗಳು ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು.

COR:- 118/08-09

ಉಲ್ಲೇಖ:-ಜಂಟಿ ಕೃಷಿ ನಿರ್ದೇಶಕರು, ಹಾಸನ ಇವರ ಪತ್ರ ನಂ. ಜಕೃನಿಹಾ ಲೇ-1 ಪರಿಹಾರ/08-09 ದಿನಾಂಕ 11-01-2009.

ಪ್ರಸ್ತಾವನೆ:

ಹಾಸನ ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಮರ್ಕುಲಿ, ಚಿಕ್ಕನಾಯಕನಹಳ್ಳಿ, ಕಲ್ಕೆರೆ ಗ್ರಾಮದ ಶ್ರೀ ಮಂಜೇಗೌಡ ಬಿನ್ ರಂಗೇಗೌಡ, ನಂಜೇಗೌಡ ಬಿನ್ ಅಮಾಸೇಗೌಡ ಮತ್ತು ರಂಗಸ್ವಾಮಿ ಬಿನ್ ಲೇ: ಕಾಳೇಗೌಡ ಇವರು ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಇವರು ವ್ಯವಸಾಯಗಾರರ ಕುಟುಂಬಕ್ಕೆ ಸೇರಿರುತ್ತಾರೆ. ಇವರುಗಳು ಬ್ಯಾಂಕ್ ನಲ್ಲಿ ಮತ್ತು ಕೈಸಾಲವಾಗಿ ಸಾಲ ಪಡೆದಿದ್ದು, ಬೆಳೆ ವಿಫಲವಾಗಿದ್ದು, ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಇವರ ಕುಟುಂಬದ ವಾರಸುದಾರರುಗಳಿಗೆ ಸರ್ಕಾರದ ವತಿಯಿಂದ ಪರಿಹಾರ ಧನ ನೀಡಬಹುದೆಂಬುದಾಗಿ ಸಹ ಅಭಿಪ್ರಾಯ ನೀಡಿರುತ್ತಾರೆ.

**ಆದೇಶದ ಸಂಖ್ಯೆ:ಎಂಎಜಿ (ರೈಆ)/166/08-09/ ದಿನಾಂಕ 24-01-2009.**

ಮೇಲೆ ವಿವರಿಸಿರುವ ಕಾರಣಗಳಿಂದ ಹಾಸನ ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಮರ್ಕುಲಿ ಗ್ರಾಮದ ಮಂಜೇಗೌಡ ರವರ ಪತ್ನಿ ಚಂದ್ರಮ್ಮ ಕೋಂ ಲೇ: ಮಂಜೇಗೌಡರವರಿಗೆ ಪಿ.ಡಿ. ಚೆಕ್ ನಂ. ಕೆ.386134 ದಿನಾಂಕ 22-01-2009ರ ರೂ.1.00 ಲಕ್ಷ (ಒಂದು ಲಕ್ಷ), ಚಿಕ್ಕನಾಯಕನಹಳ್ಳಿ ಗ್ರಾಮದ ನಂಜೇಗೌಡರವರ ಪತ್ನಿ ದೇವಮ್ಮ ಕೋಂ ಲೇ: ನಂಜೇಗೌಡರವರಿಗೆ ಪಿ.ಡಿ.ಚೆಕ್ ನಂ. ಕೆ.386135 ದಿನಾಂಕ 22-01-2009ರ ರೂ.1.00 ಲಕ್ಷ (ಒಂದು ಲಕ್ಷ), ಮತ್ತು ಕಲ್ಕೆರೆ ಗ್ರಾಮದ ರಂಗಸ್ವಾಮಿರವರ ಪತ್ನಿ ಜಯಮ್ಮ ಕೋಂ ರಂಗಸ್ವಾಮಿರವರಿಗೆ ಪಿ.ಡಿ.ಚೆಕ್ ನಂ. ಕೆ.386136 ದಿನಾಂಕ 22-01-2009ರ ರೂ.1.00 ಲಕ್ಷ (ಒಂದು ಲಕ್ಷ),ಗಳ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆ. ಆಯುಕ್ತರು, ಕೃಷಿ ಇಲಾಖೆರವರು ಬಿಡುಗಡೆಗೊಳಿಸಿದ ನಂತರ ಪರಿಹಾರ ಧನದ ಮೊಬಲಗನ್ನು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ಜಮಾ ಮಾಡುವ ನಿಬಂಧನೆ ಮೇರೆ. ಪರಿಹಾರ ಧನದ ಮೊಬಲಗನ್ನು ಸಧ್ಯಕ್ಕೆ ಜಿಲ್ಲಾಧಿಕಾರಿಗಳ ಪಿ.ಡಿ. ಲೆಕ್ಕ ಶೀರ್ಷಿಕೆಯಿಂದ ಬಿಡುಗಡೆಗೊಳಿಸಲು ಆದೇಶಿಸಲಾಗಿದೆ.

(ಕೃ.ಟಿ.ಆ,ಮೇ.)

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.

ಪ್ರತಿಯನ್ನು:

1. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
2. ಉಪ ವಿಭಾಗಾಧಿಕಾರಿಗಳು, ಹಾಸನ.
3. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ.
4. ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ,ಹಾಸನ/ಚನ್ನರಾಯಪಟ್ಟಣ.
5. ತಹಸೀಲ್ದಾರರು, ಹಾಸನ/ಚನ್ನರಾಯಪಟ್ಟಣ ತಾಲ್ಲೂಕು.
6. ಶ್ರೀಮತಿ ಚಂದ್ರಮ್ಮ ಕೋಂ ಲೇಟ್ ಮಂಜೇಗೌಡ, ಮರ್ಕುಲಿ, ಹಾಸನ ತಾಲ್ಲೂಕು, ದೇವಮ್ಮ ಕೋಂ ಲೇ: ನಂಜೇಗೌಡ, ಚಿಕ್ಕನಾಯಕನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು ಮತ್ತು ಜಯಮ್ಮ ಕೋಂ ರಂಗಸ್ವಾಮಿ, ಕಲ್ಕೆರೆ, ಚನ್ನರಾಯಪಟ್ಟಣ ತಾಲ್ಲೂಕು ರವರಿಗೆ.

Mag (ral.Ha.)